# IN THE COURT OF THE ADDL. SENIOR CIVIL JUDGE & JMFC., GUBBI

# OS – 222/2024

Witness present and duly sworn on : 03.03.2026.

<u>Further Examination in chief by Plaintiff :</u>

Further I have produced following documents.

1. Original death certificate of my mother Chikkathayamma. It is marked as Ex.P.15.
2. My school certificate. It is marked as Ex.P.16.
3. School certificate of younger sister M N Baby/plaintiff No.3. It is marked as Ex.P.17.
4. Original Aadhar Card of my mother Chikkathayamma. It is marked as Ex.P.18.
5. My original Aadhar Card. It is marked as Ex.P.19.
6. My original Election identity card. It is marked as Ex.P.20.
7. Original identity card of my younger sister Aasha/plaintiff No.2. It is marked as Ex.P.21.

Hence, I pray to decree the suit.

**<u>Cross examination by Counsel for Defendant No.6 to 9:</u>**

ನಾನು 4 ನೇ ಯ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳು ನನಗೆ ಗೊತ್ತಿದೆ. ನನಗೆ ಓದಲು ಬರುವುದಿಲ್ಲ. ಈ ದಾವೆಯನ್ನು 9 ಜನರ ಮತ್ತು 4 ಜಮೀನುಗಳಿಗೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂಬರ್ ನನಗೆ

ನೆನಪಿಲ್ಲ. ದಾವಾ ಐಟಂ ನಂ.1 ರಲ್ಲಿ ಸರ್ವೆ ನಂ.7/11 ರಲ್ಲಿ 1 ಎಕರೆ 8 ಗುಂಟೆ 7 ನೇ ಪ್ರತಿವಾದಿ ಶಶಿಕಲಾ ರವರ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಸರ್ವೆ ನಂ.35/3 ಎ 1 ರಲ್ಲಿ 15 ಗುಂಟೆ ಜಮೀನು ಜಂಟಿಯಾಗಿ ಚಿಕ್ಕದೊಡ್ಡಯ್ಯ, ಯಲ್ಲಕ್ಷ್ಮಮ್ಮ ಮತ್ತು ಪುಟ್ಟಮ್ಮ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಯಲ್ಲಕ್ಕಮ್ಮ ಮತ್ತು ಪುಟ್ಟಮ್ಮ ರವರನ್ನು ಈ ದಾವೆಯಲ್ಲಿ ಸೇರಿಸಿದ್ದಿರಾ ಎಂದರೆ ಪುಟ್ಟಮ್ಮ ರವರನ್ನು ಸೇರಿಸಿದ್ದೇನೆ ಮತ್ತು ಯಲ್ಲಕ್ಷ್ಮಮ್ಮ ರವರನ್ನು ಸೇರಿಸಿರುವುದಿಲ್ಲ. ದಾವಾ ಐಟಂ ನಂ.4 ಸರ್ವೆ ನಂ.47 ಜಮೀನಿನಲ್ಲಿ 13 ಗುಂಟೆ ಮೇಲ್ಪಟ್ಟು 1 ಎಕರೆ 13 ಗುಂಟೆ ಜಮೀನು ಇದೆ ಎಂದರೆ ಪಹಣಿ ಪ್ರಕಾರ ದಾವಾ ಆಸ್ತಿಯನ್ನು ಸೇರಿಸಿರುತ್ತೇನೆ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ಪಹಣಿ ಪತ್ರಿಕೆಯಲ್ಲಿ 1 ಎಕರೆ 13 ಗುಂಟೆ ತೋರಿಸುತ್ತದೆ ಎಂದರೆ ಸರಿ. ಸದರಿ ಜಮೀನಿನ ಪಹಣಿ ಪತ್ರಿಕೆಯು ಜಂಟಿಯಾಗಿ ಚಿಕ್ಕರಂಗಯ್ಯ, ಶಶಿಕಲಾ, ಕೋಕಿಲಾ ಮೊಉಹನ್ ಕುಮಾರ್ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಚಿಕ್ಕರಂಗಯ್ಯ, ಕೋಕಿಲಾ ಮೋಹನ್ ಕುಮಾರ್ ರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ.

ಸರ್ವೆ ನಂ.48 ರಲ್ಲಿ 25 ಗುಂಟೆ ಯಾರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.49 ಐಟಂ ನಂ.6 ರಲ್ಲಿ ಒಟ್ಟು 33 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಯಲ್ಲಿ 33 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಜಂಟಿಯಾಗಿ ಅಮೃತಯ್ಯ ಮತ್ತು ಶಶಿಕಲಾ ರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಜಂಟಿಯಾಗಿ ಇದ್ದರು ಸಹ ಅಮೃತಯ್ಯರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ವಂಶವೃಕ್ಷವನ್ನು ತಹಶೀಲ್ದಾರ್ ರವರ ಧೃಡೀಕರಣವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಧೃಡೀಕರಣ ಪತ್ರವು ಮನೆಯಲ್ಲಿ ಇರುತ್ತದೆ. ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಬಲ್ಲೇನು. ರಂಗಯ್ಯ ಮತ್ತು ದೊಡ್ಡಮ್ಮ ರವರರಿಗೆ ದೊಡ್ಡಯ್ಯ, ನಂದಯ್ಯ, ರಂಗಮ್ಮ ಎಂಬ ಮಕ್ಕಳು. ರಂಗಯ್ಯ ರವರಿಗೆ ಒಟ್ಟು ಮೂರು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

(Further cross-examination of deferred at the request of the counsel for defendant No.6 to 9)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi